ಪಿಡಬ್ಲ್ಯೂ-2, ಪಿ.ಸಿ.ಆರ್. ನಂ.108-2025

ಸಾಕ್ಷಿಗೆ ಸತ್ಯಪ್ರತಿಜ್ಞೆ ಮಾಡಿಸಲಾಯಿತು.
ದಿನಾಂಕಃ 29-04-2026

ಸಾಕ್ಷಿಯ ಹೆಸರುಃ ಶಾಂತ ಕುಮಾರ್
ತಂದೆಯ ಹೆಸರುಃ ಕೃಷ್ಣಪ್ಪ
ವಯಸ್ಸುಃ 54
ವೃತ್ತಿಃ ವ್ಯವಹಾರ
ವಾಸಃ ಕೋಲಾರ
<u>ಸ್ವಪ್ರಮಾಣೀಕೃತ</u> **ಹೇಳಿಕೆಃ**

ಈ ಪ್ರಕರಣದ ಪಿರ್ಯಾದುದಾರರು ರಾಮರಾಜು ಹಾಗೂ ಆರೋಪಿ ಶ್ರೀ ಚಂದು ರವರ ನಡುವೆ ಮಾರ್ಕೆಂಟ್‌ಗ್ ವ್ಯವಹಾರದ ಸಂಬಂದ 2 ಎಕರೆ ಜಾಗದಲ್ಲಿ ನಿವೇಶಗಳನ್ನು ಮಾರಾಟ ಮಾಡುವಂತೆ ಒಪ್ಪಂದ ಆಗಿರುತ್ತದೆ. ಸದರಿ ಒಪ್ಪಂದದ ಅನ್ವಯ ಪಿರ್ಯಾದುದಾರರು ಶ್ರಿಚಂದುರವರಿಗೆ ಮುಂಗಡ ಹಣ ನೀಡಿರುತ್ತಾರೆ. ಪಿರ್ಯಾದುದಾರರು ನಿವೇಶನ ಮಾರಾಟದ ಸಂಬಂಧ ಪೋಸ್ಟರ್ಗಳನ್ನು ಹಾಕಿ Online ಮುಖಾಂತರ ಮಾರ್ಕೆಂಟ್‌ಗ್ ಮಾಡಿರುತ್ತಾರೆ. ಪಿರ್ಯಾದುದಾರರ ಮೂಲಕ ಬಂದಂತಹ ಗ್ರಾಹಕರಿಗೆ ಆರೋಪಿ ಸರಿಯಾದ ದಾಖಲಾತಿಗಳನ್ನು ನೀಡದೇ, ಅವರೇ ನಿವೇಶನ ಮಾರಾಟ ಮಾಡಲು ಮುಂದಾಗಿರುತ್ತಾರೆ, ಹಾಗೂ ಪಿರ್ಯಾದುದಾರರ ಮೂಲಕ ನೀವೇಶನ ಮಾರಾಟ ಮಾಡುವುದನ್ನು ತಡೆದಿರುತ್ತಾರೆ. ನಂತರ ನಾವು ಈ ಸಂಬಂಧ ವಿಚಾರಿಸಿದಾಗ ಸದರಿ ನಿವೇಶನದ ಜಾಗ ಆರೋಪಿಗೆ ಸೇರದ ಜಾಗವಾಗಿದ್ದು , ಪಿರ್ಯಾದುದಾರರು ಮುಂಗಡ ಹಣವನ್ನು ಮತ್ತು ನಾವು ಖರ್ಚು ಮಾಡಿರುವ ಹಣವನ್ನು ಹಿಂದಿರುಗಿಸುವಂತೆ ಕೇಳಿದಾಗ ಆರೋಪಿ ಹಣ ಹಿಂದಿರುಗಿಸುವುದಿಲ್ಲ ಎಂದು ನುಡಿದಿರುತ್ತಾರೆ. ಹಣ ಕೇಳಲು ನಾನು ಪಿರ್ಯಾದುದಾರರೊಂದಿಗೆ ಆರೋಪಿಯ ಕಛೇರಿಗೆ ಹೋದಾಗ ಆರೋಪಿ ಪಿರ್ಯಾದುದಾರರನ್ನು ಅವಾಚ್ಯ ಶಬ್ದಗಳಿಂದ ಬೈದು ಹಣ ನೀಡದೇ ವಾಪಾಸು ಕಳುಹಿಸಿರುತ್ತಾರೆ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).
ಓ.ಹೇ.ಕೇ.ಸ.ಎ. ಒಪ್ಪಲಾಗಿದೆ.

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ದೇವನಹಳ್ಳಿ